# IN THE COURT OF THE ADDL. SENIOR CIVIL JUDGE & JMFC., GUBBI
# OS – 65/2016

Witness recalled and duly sworn on : 01.06.2024.

Cross Examination: by Counsel for Defendant No.52. :

ನನ್ನ ಗಂಡ ದೊಡ್ಡಯ್ಯನವರು ಆರಾಮಾಗಿ ಓಡಾಡಿಕೊಂಡು ಇದ್ದಾರೆ ಎಂದರೆ ಅವರಿಗೆ ಬುದ್ಧಿ ಸ್ವಲ್ಪ ಕಡಿಮೆ ಇರುತ್ತದೆ. ಈ ದಾವೆಯನ್ನು ನನ್ನ ಗಂಡ ಸಲ್ಲಿಸಿರುತ್ತಾರೆ. ನಾನು ಈಗ ಕೆರೆಅಂಗಳದಲ್ಲಿ ವಾಸ ಇದ್ದೇನೆ. ನನ್ನ ತವರು ಮನೆ ಕೊರಟಗೆರೆ ಹತ್ತಿರ ಪಾಲನಹಳ್ಳಿ. ನನ್ನ ಮದುವೆಯಾಗಿ ಸುಮಾರು 50 ವರ್ಷಗಳಾಗಿವೆ. ದಾವಾ ಆಸ್ತಿಗಳಿಗೆ ಸಂಭಂದಿಸಿದಂತೆ ನನ್ನ ಮದುವೆಯ ಮುಂಚೆ ಆಗಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮಾವನ ಹೆಸರು ಹನುಮಯ್ಯ. ಅವರು ನನ್ನ ಮದುವೆಯ ಕಾಲದಲ್ಲಿ ಜೀವಂತ ಇರಲಿಲ್ಲ . ಅವರಿಗೆ 3 ಜನ ಮಕ್ಕಳು. ಅವರುಗಳು ಸಂಜೀವಯ್ಯ, ದೊಡ್ಡಯ್ಯ( ನನ್ನ ಗಂಡ) ಮತ್ತು ಜಯಮ್ಮ. ಜಯಮ್ಮನವರು ಬದುಕಿದ್ದು ಅವರು ತುರುವೇಕೆರೆಯಲ್ಲಿ ವಾಸ ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ. ನಾನು ಅವರನ್ನು ಈ ದಾವೆಯಲ್ಲಿ ಸೇರಿಸದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ರಾಮದಾಸಪ್ಪ ಎಂದು ನನ್ನ ಮಾವನ ತಮ್ಮ ಇದ್ದಾರೆ ಎಂದರೆ ಸರಿ. ನನ್ನ ಮಾವನ ತಂದೆಯ ಹೆಸರು ಚಿಕ್ಕಣ್ಣ ಎಂದರೆ ಸರಿ. ಚಿಕ್ಕಣ್ಣನವರಿಗೆ ಹನುಮಯ್ಯ ಮತ್ತು ರಾಮದಾಸಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಅವರಿಗೆ ಒಬ್ಬ ಹೆಣ್ಣು ಮಗಳು ಸಂಜೀವಮ್ಮ ಇದ್ದರು ಅವರು ಈಗ ಜೀವಂತ ಇಲ್ಲ. ಸಂಜೀವಮ್ಮನವರಿಗೆ ಗಂಡ ಮತ್ತು ಮಕ್ಕಳು ಇದ್ದಾರೆ ಎಂದರೆ ಗಂಡ ಇರುವುದಿಲ್ಲ ಆದರೆ ಮಕ್ಕಳು ಇರುತ್ತಾರೆ. ಸದರಿ ಚಿಕ್ಕಣ್ಣನವರಿಗೆ ಭೀಮಯ್ಯ, ಹನುಮಂತಯ್ಯ, ದೊಡ್ಡಯ್ಯ ಮತ್ತು ಚಿಕ್ಕಣ್ಣ ಎಂಬ ಅಣ್ಣ ತಮ್ಮಂದಿರು. ಅವರುಗಳು ಜೀವಂತ ಇರುವುದಿಲ್ಲ. ಅವರುಗಳು ಮಕ್ಕಳು ಇದ್ದಾರೆ ಎಂದರೆ ಸರಿ.

ಚಿಕ್ಕೇರಿ ಸಂಜೀವಯ್ಯ ಮತ್ತು ಆತನ ಅಣ್ಣ ತಮ್ಮಂದಿರು ಸುಮಾರು 70-80 ವರ್ಷಗಳ ಹಿಂದೆ ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಬಹಳ ವರ್ಷಗಳ ಹಿಂದೆ ನನ್ನ ಗಂಡನ ತಾತ ದೊಡ್ಡಯ್ಯ (ಚಿಕ್ಕಣ್ಣ ನ ಅಣ್ಣ) ಭೀಮಯ್ಯ ಮರಣ ಹೊಂದಿದ್ದಾರೆ ಎಂದರೆ ಸರಿ. ಅವರುಗಳು ಮರಣದ ನಂತರ ನನ್ನ ಮಾವ ಹನುಮಂತಯ್ಯ ಮತ್ತು ಆತನ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ 04.02.1952 ರಲ್ಲಿ ಒಟ್ಟು ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಿಕ್ಕಣ್ಣನವರ ಆಸ್ತಿಯಲ್ಲಿ ಭಾಗ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಭಾಗದಲ್ಲಿ 4 ಜನ ಭಾಗಗಳಾಗಿದ್ದು ಖಾತೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendant No.52.)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi